ಶ್ರೀ ಕಾಗೋಡು ತಿಮ್ಮಪ್ಪ:—ನಾನು ಸಲಹೆ ಮಾಡುವುದು ಏನೆಂದರೆ ಎರಡು ವರ್ಷಕ್ಕೆ ಮುಂಚೆ ಕಾರುಗಳಿಗೆ ಅಪ್ಲೈ ಮಾಡಿದವರಿಗೆ ಇದುವರೆಗೂ ಕಾರುಗಳು ಸಿಗಲಿಲ್ಲ. ಕೇವಲ ಆರು ತಿಂಗಳಲ್ಲಿ ಅಪ್ಲೈ ಮಾಡಿದವರಿಗೆ ಕಾರು ಸಿಗುತ್ತದೆ. ಇದನ್ನು ತಪ್ಪಿಸಲು ಒಂದು ಪ್ರಯಾರಿಟಿ ಲಿಸ್ಟು ಮಾಡಿಕೊಂಡು ಅದರ ಪ್ರಕಾರ ಯಾರು ಮೊದಲು ಅರ್ಜಿ ಕೊಟ್ಟಿದ್ದಾರೆ ಅವರಿಗೆ ಮೊದಲು ಕೊಟ್ಟು ಇತರರಿಗೆ ಅನಂತರ ಕೊಡಲು ಏಕೆ ಪ್ರಯತ್ನ ಮಾಡಬಾರದು ?

ಶ್ರೀ ಎಚ್. ಎಂ. ಚನ್ನಬಸಪ್ಪ:— ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಯನ್ನು ವಿಚಾರ ಮಾಡುತ್ತೇನೆ.

ಶ್ರೀ ಜೆ. ಎಲ್ ಕಟ್ಟಾಡಿ.—ಇದುವರೆಗೆ ಈ ಸಭೆಯ ಸದಸ್ಯರಿಗೆ ಹಾಗೂ ಪರಿಷತ್ತಿನ ಸದಸ್ಯರುಗಳಿಗೆ ಎಷ್ಟು ಕಾರುಗಳನ್ನು ಕೇಳಿದ್ದಾರೆ, ಅದರ ಕಾರ್ಡಿನ ಒಂದು ಪಟ್ಟಿಯನ್ನು ಸಭೆಗೆ ಒದಗಿಸಿಕೊಡಲು ಆಗುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಬೇರೆ ಪ್ರಶ್ನೆ ಕೇಳಿದರೆ ವಿವರಗಳನ್ನು ಒದಗಿಸಿ ಕೊಡುತ್ತೇನೆ.

ಶ್ರೀ ಎನ್. ಎನ್. ಗುರುಸಿದ್ದಪ್ಪ.—ಇಲ್ಲಿಯ ವರೆಗೆ ವಿರೋಧ ಪಕ್ಷದವರು ಎಷ್ಟು ಜನರು ಅಪ್ಲೈ ಮಾಡಿದ್ದಾರೆ, ಎಷ್ಟು ಜನರಿಗೆ ಕೊಟ್ಟಿದ್ದೀರಿ ? ಆಡಳಿತ ಪಕ್ಷದವರು ಎಷ್ಟು ಜನರು ಅಪ್ಲೈ ಮಾಡಿದ್ದಾರೆ; ಎಷ್ಟು ಜನರಿಗೆ ಕೊಟ್ಟಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೇರೆ ಪ್ರಶ್ನೆ ಕೇಳಿದರೆ ಉತ್ತರ ಒದಗಿಸುತ್ತೇನೆ.

BUS STAND AT CHITRADURGA

318. Sri C. R. MOHAMED SAIFUDDIN (Chitradurga).—Will the Minister for labour be pleased to state:—

a) Whether the construction of Government Bus Stand at Chitradurga will be taken up, if so, when ?

b) the place and the amount alloted for the construction of the Bus Stand ?.

Sri AZEEZ SAIT (Minister for Labour).—

a) Yes. After finalisation of the site.

b) The place is under finalisation. The amount will be allotted taking into account the traffic requirements on taking possession of the land.

ಶ್ರೀ ಸಿ. ಆರ್. ಮಹಮ್ಮದ ಸೈಫುದ್ದೀನ.—ನಿವೇಶನದ ಅಯ್ಯೆಯನ್ನು ಯಾವಾಗ ಅಂತಿಮಗೊಳಿಸಲಾಗುತ್ತದೆಂಬುದನ್ನು ಹೇಳುತ್ತೀರಾ ?

†ಶ್ರೀ ಅಜೀಜ ಸೇಟ.—ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಕೆಲವು ತಿಂಗಳ ಹಿಂದೆ ನಾನು ಚಿತ್ರದುರ್ಗಕ್ಕೆ ಹೋದಾಗ ತಮ್ಮ ಜೊತೆಯಲ್ಲಿ ಮತ್ತು ಅಧಿಕಾರಿಗಳ ಜೊತೆಯಲ್ಲಿ ರೈಲ್ವೆ ಸ್ಟೇಷನ ಹತ್ತಿರವಿರುವ ಜಾಗಕ್ಕೆ ಹೋಗಿ ನೋಡಿ, ಆ ಜಾಗವನ್ನು ತೀರ್ಮಾನ ಮಾಡಿಕೊಂಡು ಬಂದಿದ್ದೇವೆ. ಆ ಜಾಗದಲ್ಲಿ ಬಸ್‌ಸ್ಟ್ಯಾಂಡ ಮತ್ತು ಡಿಪೋವನ್ನು ಕಟ್ಟಬೇಕೆಂಬ ಬಗ್ಗೆ ಮಾತುಕತೆ ನಡೆದಿದೆ. ಈಗ ಆ ವಿಷಯ ಬೋರ್ಡಿನ ಮುಂದೆ ಇದೆ. ಅವರು ತೀರ್ಮಾನ ತೆಗೆದುಕೊಂಡ ತಕ್ಷಣ ಆ ಜಾಗದಲ್ಲಿ ಬಸ್‌ಸ್ಟ್ಯಾಂಡ ಕಟ್ಟಿಸಿಕೊಡುತ್ತೇವೆ.

ಶ್ರೀ ಸಿ. ಆರ್. ಮಹಮ್ಮದ ಸೈಫುದ್ದೀನ.—ಈಗ ಅಲ್ಲಿಂದ ಬೊಂಬಾಯಿ ಕನಕ ಹೋಗುವವರಿಗೆ ಯಾವ ಅನುಕೂಲಗಳು ಇಲ್ಲದಿರುವದರಿಂದ ಈ ಕೆಲಸವನ್ನು ಮಾಡಿಸಿಕೊಡುವ ಬಗ್ಗೆ ಟೈಮು ಲಿಮಿಟ್ ಏನಾದರೂ ಇದೆಯೇ ?

ಶ್ರೀ ಅಜೀಜ ಸೇಟ.—ಈ ಕಾರಣದಿಂದಲೇ, ಅದು ನಾಷನಲ್ ಹೈವೇ ಇರುವದರಿಂದ, ಮುಂಬೈ ಮತ್ತು ಗೋವಾದಿಂದ ಬರುವವರಿಗೆ ಅನುಕೂಲ ಇಲ್ಲದಿರುವದರಿಂದ, ಗೆಸ್ಟಹೌಸ ಮತ್ತು ಬಸ್‌ಸ್ಟ್ಯಾಂಡ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂಬ ಸಲಹೆಯನ್ನು ಒಪ್ಪಿಕೊಂಡು ಅದರ ಬಗ್ಗೆ ಕ್ರಮ ತೆದುಕೊಳ್ಳುತ್ತಿದ್ದೇವೆ. ಅದು ಆಗುವ ವರೆಗೆ ದಯಮಾಡಿ ತಾವು ತಡೆದುಕೊಳ್ಳಬೇಕಾಗುತ್ತದೆ.

VANI VILAS SAGAR AS TOURIST CENTRE

322. Sri C. R. MOHAMED SAIFUDDIN (Chitradurga).—Will the Minister for Labour be pleased to state :—

a) whether Vani Vilas Sagar has been considered as a Tourist Centre ; if so the steps taken by the Government to improve it ;

b) whether Government intends to electrify the Vani Vilas Sagar Dam ;

c) whether there is any proposal to convert the waste land in the Vani Vilas Sagar Dam area into a garden ?

Sri AZEEZ SAIT (Minister for Labour).—

a) Yes. A Tourist Home has been built for the use of Visitors.